ಶ್ರೀ ವೈ. ಎಂ. ವೀರಣ್ಣ.— ಸುಮಾರು ೩೦ ವರ್ಷಗಳ ಹಿಂದೆ ನಗರ ಸಭೆಯವರು ಅಲ್ಲಿನ ಒಬ್ಬಂದಿ ವರ್ಗದವರ ಪುನೆಗಳಿಗಾಗಿ ಒಂದು ನಿವೇಶನ ಒಂದನ್ನು ಕೊಟ್ಟಿದ್ದಾರೆ. ಆದನ್ನು ಮೊನ್ನೆ ಆಡಳಿತಾಧಿಕಾರಿಗಳು ಇದ್ದಂತಹ ಸಂದರ್ಭದಲ್ಲಿ ಆ ನಿವೇಶನವನ್ನು ವಾಪಸ್ಸು ಪಡೆಯುವುದಕ್ಕೆ ಪ್ರಯತ್ನ ಪಟ್ಟಿದ್ದರು. ಏಕೆಂದರೆ ಅಲ್ಲಿ ಸರ್ಕಾರ ಯಾವುದೇ ಕ್ರಮ ತೆಗೆದುಕೊಂಡಿಲ್ಲದೇ ಇರುವುದರಿಂದ ಆದನ್ನು ಏಕೆ ವಾಪಸ್ಸು ತೆಗೆದುಕೊಳ್ಳಬಾರದೆಂದು ನಿರ್ಧಾರ ಮಾಡಿದ್ದರು. ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ನಿವೇಶನವನ್ನು ಖಾಲಿ ಬಿಟ್ಟಿದ್ದಾರೆ. ಇದರ ಬಗ್ಗೆ ಸರ್ಕಾರ ಯಾವ ರೀತಿಯ ಕ್ರಮ ತೆಗೆದು ಕೊಂಡಿದೆ ಎಂಬುದರ ಬಗ್ಗೆ ಮಾನ್ಯ ಸಚಿವರು ಸಮಂಜಸವಾದ ಉತ್ತರ ಕೊಟ್ಟರೆ ಸರಿಹೋಗುತ್ತದೆಂಬ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು.— ನೀವು ಸಮಂಜಸವಾದ ಪ್ರಶ್ನೆಯನ್ನು ಕೇಳಿಲ್ಲ. ಸಮಂಜಸವಾದ ಉತ್ತರವನ್ನು ಮಾನ್ಯ ಸಚಿವರು ಹೇಗೆ ಕೊಡುತ್ತಾರೆ ? ಈಗ ನೀವು ಕೇಳುತ್ತಿರುವ ಉಪ ಪ್ರಶ್ನೆಯೇ ಬೇರೆ ಆಗಿದೆ.

ಶ್ರೀಮತಿ ಮನೋರಮಾ ಮಧ್ವರಾಜ್.— ಈ ಬಗ್ಗೆ ಮಾನ್ಯ ಸಣವರು ಬೇರೊಂದು ಪ್ರಶ್ನೆ ಕಳಂಹಿಸಿದರೆ ಅದಕ್ಕೆ ಉತ್ತರ ಒದಗಿಸಲಾಗುವುದು. ಈ ಪ್ರಶ್ನೆಯಲ್ಲಿ ಅದು ಉದ್ಭವಿಸಂವುದಿಲ್ಲ.

ಅಧ್ಯಕ್ಷರು.— ತಾವು ಮುಂದಿನ ಸಲ ಸರಿಯಾದ ಪ್ರಶ್ನೆಯನ್ನು ಕಳುಹಿಸಿಕೊಡಿ.

ಬಳ್ಳಾರಿ ವೈದ್ಯಕೀಯ ಕಾಲೇಜಿನ ಪ್ರೊಫೆಸರುಗಳಂ

೬೮ ಶ್ರೀ ಎಂ. ರಾಮಪ್ಪ (ಬಳ್ಳಾರಿ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಾಲೇಜಿನಲ್ಲಿ ಕೆಲಸ ಮಾಡದೇ ವೇತನ ಪಡೆದಿರುವ ಬಳ್ಳಾರಿ ವೈದ್ಯಕೀಯ ಕಾಲೇಜಿನ ಪ್ರೊಫೆಸರ್‌ಗಳ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು ?

ಆ) ಇಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಸಹ ನಿರ್ದೇಶಕರು ವೈದ್ಯಕೀಯ ಶಿಕ್ಷಣ ಬೆಂಗಳೂರು ಇವರು ಈ ವಿಚಾರದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ. ಅವರ ವರದಿಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಶ್ರೀ ಎಂ. ರಾಮಪ್ಪ.— ಹೋದ ಸಲ ನಡೆದ ಅಧಿವೇಶನದಲ್ಲಿ ಇದೇ ಪ್ರಶ್ನೆಗೆ ಉತ್ತರವಾಗಿ ಮಾನ್ಯ ಮಂತ್ರಿಗಳು ಯಾರ್ಯಾರು ಸರಿಯಾಗಿ ಕೆಲಸ ಮಾಡದೆ ಸಂಬಳವನ್ನು ತೆಗೆದುಕೊಂಡಿದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದರು. ಆದರೆ ಇಲ್ಲಿಯವರೆವಿಗೂ ಏನೂ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ಕ್ರಮವನ್ನೇ ತೆಗೆದುಕೊಂಡಿಲ್ಲ. ಅಮೇಲೆ ಕೆಲವರ ಬಗ್ಗೆ ಹೇಳಬೇಕಾದರೆ ಕೆಲವು ಡಾಕ್ಟರ್ಸ್‌ಗಳು ಪೋರದೇಶಕ್ಕೆ ಹೋಗಿದ್ದಾರೆ, ಅವರ ಮೇಲೂ ಏನು ಕ್ರಮ ತೆಗೆದುಕೊಂಡಿಲ್ಲ. ಇದರ ಬಗ್ಗೆ ಯಾರನ್ನು ಕೇಳಬೇಕೆಂಬುದು ನನಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಇದರ ಬಗ್ಗೆ ಏನು ಸೂಕ್ತ ಕ್ರಮ ತೆಗೆದುಕೊಂಡಿದ್ದೀರಿ ? ಯಾವಾಗ ತೆಗೆದುಕೊಂಡಿದ್ದೀರಿ ಎಂಬುದನ್ನು ಮಾನ್ಯ ಸಚಿವರು ಹೇಳಬೇಕು.

ಶ್ರೀಮತಿ ಮನೋರಮಾ ಮಧ್ವರಾಜ್.— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆ ಎಂದರೆ ಪ್ರೊಫೆಸರ್‌ಗಳ ಬಗ್ಗೆ ಪ್ರೊಫೆಸರ್‌ಗಳ ವೈಕಿ ಕೆ. ಚಂದ್ರಶೇಖರ ರಾವ್ ಎನ್ನುವವರ ಬಗ್ಗೆ ಬಹಳ ಯಥೇಚ್ಛವಾದ ದೂರುಗಳು ಬಂದಿರುತ್ತವೆ ಈ ಬಗ್ಗೆ ಇಲಾಖೆಯ ಜಂಟಿ ನಿರ್ದೇಶಕರು ತನಿಖೆ ನಡೆಸಿ ವರದಿ ಸಲ್ಲಿಸಿದ್ದಾರೆ ಇನ್ನೂ ಇಲಾಖೆಯ ಪರವಿಂದ ಎನ್‌ಕ್ವೈರಿ ಆಗಬೇಕಾಗಿದೆ. ಈ ವೈದ್ಯರು ಬೇರೆ ರಾಷ್ಟ್ರದಲ್ಲಿದ್ದಾರೆಂದು ಹೇಳಿದ್ದಾರೆ. ನಾವು ಇಂಥ ದೂರುಗಳ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆಮಾಡಿ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಅದು ಏನೆಂದರೆ ಯಾರು ೧೦ ವರ್ಷಕ್ಕಿಂತಲೂ ಹೆಚ್ಚುಕಾಲ ಕೆಲಸಕ್ಕೆ ಗೈರುಹಾಜರಾಗುತ್ತಾರೆ ಅವರನ್ನು ಕೂಡಲೇ ಕೆಲಸದಿಂದಲೇ ತೆಗೆದುಹಾಕಬೇಕು ಎಂದು ಒಂದು ನಿರ್ಣಯಕ್ಕೆ ಬಂದಿದ್ದೇವೆ.

ಶ್ರೀ ಎಂ. ರಾಮಪ್ಪ.—ವೈದ್ಯಕೀಯ ಶಿಕ್ಷಣ ಇಲಾಖೆಯ ಸಹ ನಿರ್ದೇಶಕರು ಈ ಬಗ್ಗೆ ತನಿಖೆ ನಡೆಸಿ ಒಂದು ವರದಿಯನ್ನು ಕೊಟ್ಟಿದ್ದಾರೆ, ಇಲಾಖೆಯ ವತಿಯಿಂದ ಎನ್‌ಕ್ವೈರಿ ಆದಕೂಡಲೇ

ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದಿರಿ. ಈ ರೀತಿ ಕ್ರಮ ಕೈಗೊಳ್ಳಲು ಎಷ್ಟು ದಿವಸ ಬೇಕಾಗುತ್ತದೆ. ಇದಕ್ಕೆ ಏನಾದರೂ ಒಂದು ಟೈಂ ಬೌಂಡ್ ಹಾಕಿಕೊಂಡಿದ್ದೀರಾ ?

ಶ್ರೀಮತಿ ಮನೋರಮಾ ಮಾಧ್ವರಾಜ್.—ಇಲಾಖೆಯ ವತಿಯಿಂದ ತನಿಖೆ ಆದಕೂಡಲೇ ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುತ್ತೇವೆ.

ದೊಡ್ಡವಾಡ ಪಿ. ಎಚ್. ಸಿ, ಗೆ ವೈದ್ಯಾಧಿಕಾರಿ ನೇಮಕ

೪೬೨. ಶ್ರೀ ಶಿವಾನಂದ ಎಚ್.ಕೌಜಲಗಿ, (ಬೈಲಹೊಂಗಲ)—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಬೆಳಗಾಂ ಜಿಲ್ಲೆಯ ಬೈಲಹೊಂಗಲ ತಾಲ್ಲೂಕಿನ ದೊಡ್ಡವಾಡ ಪಿ.ಹೆಚ್.ಸಿ. ಮೆಡಿಕಲ್ ಆಫೀಸರ್ ಇವರನ್ನು ಕಳೆದ ಒಂದೂವರೆ ವರ್ಷಗಳಿಂದ ಡೆಪ್ಯೂಟೇಶನ್‌ ಮೇಲೆ ಬೇರೆ ಕಡೆಗೆ ಡಿ.ಹೆಚ್.ಪಿ ಬೆಳಗಾಂ ಇವರು ಪೋಸ್ಟಿಂಗ್ ಮಾಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ

(ಆ) ಆ ಪಿ ಹೆಚ್.ಸಿ. ಯಲ್ಲಿ ಮೆಡಿಕಲ್ ಆಫೀಸರ್ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಇ) ಆ ಪಿ. ಹೆಚ್.ಸಿ.ಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರ್‌ನ್ನು ನೇಮಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಮನೋರಮಾ ಮಾಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

(ಅ) ಬಂದಿದೆ.

(ಆ) ಬಂದಿದೆ.

(ಇ) ಸರ್ಕಾರದ ಅಧಿಸೂಚನೆ ದಿನಾಂಕ ೩೧-೫-೧೯೯೦ರ ಪ್ರಕಾರ ಈಗಾಗಲೇ ಒಬ್ಬ ವೈದ್ಯರನ್ನು ನೇಮಿಸಲಾಗಿದೆ.

ಶ್ರೀ ಎಸ್. ಹೆಚ್. ಕೌಜಲಗಿ.—ಆ ಪಿ. ಹೆಚ್. ಸಿ. ಯಲ್ಲಿ ಎಷ್ಟು ಜನ ಮೆಡಿಕಲ್ ಆಫೀಸರ್ಸ್ ಇದ್ದಾರೆ? ಅವರನ್ನು ಯಾವ ತಾರೀಖಿನಿಂದ ಡೆಪ್ಯುಟೇಷನ್‌ನ ಮೇಲೆ ಎಲ್ಲಿಗೆ ಕಳುಹಿಸಿಕೊಡಲಾಗಿದೆ? ಎಂಬುದನ್ನು ತಿಳಿಸಬೇಕು? ಇನ್ನು ದೊಡ್ಡವಾಡ ಪಿ.ಹೆಚ್.ಸಿ.ಗೆ ಒಬ್ಬ ದಕ್ಷ ಮೆಡಿಕಲ್ ಆಫೀಸರನ್ನು ತಾ. ೩೧-೫-೯೦ರಂದು ನೇಮಕ ಮಾಡಲಾಗಿದೆ ಎಂದು ಹೇಳಿದ್ದೀರಿ. ಇದಕ್ಕಾಗಿ ತಮಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಆದರೆ ಅವರು ಇನ್ನೂ ಕೂಡ ಕೆಲಸದಮೇಲೆ ಹಾಜರಾಗಿಲ್ಲ. ಆದ್ದರಿಂದ ಕೂಡಲೇ ಅವರು ಅಲ್ಲಿ ಹೋಗಿ ಕೆಲಸಕ್ಕೆ ಸೇರಿಕೊಳ್ಳುವಂತೆ ತಿಳಿಸಬೇಕು. ಅವರನ್ನು ಬೇರೆಕಡೆ ಎಲ್ಲಿಗೂ ವರ್ಗಮಾಡಬಾರದೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಮನೋರಮಾ ಮಾಧ್ವರಾಜ್.—ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್ ಹೆಚ್. ಕೌಜಲಗಿ —ಈ ಪಿ.ಹೆಚ್.ಸಿ. ಯಲ್ಲಿ ಎಷ್ಟುಜನ ಮೆಡಿಕಲ್ ಆಫೀಸರ್ಸ್ ಇದ್ದಾರೆ? ಅವರನ್ನು ಎಷ್ಟು ದಿವಸದಿಂದ ಡೆಪ್ಯುಟೇಷನ್ ಕಳುಹಿಸಿಕೊಟ್ಟಿದ್ದೀರಿ?

ಶ್ರೀಮತಿ ಮನೋರಮಾ ಮಾಧ್ವರಾಜ್.— ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ —ನಾನು ಕೇಳಿರುವಕ್ಕೆ ಪ್ರಶ್ನೆಗೆ ಹೌದು ಎಂದು ಉತ್ತರವನ್ನು ಕೊಟ್ಟಿದ್ದೀರಿ. ಬೆಳಗಾಂ ಡಿ.ಹೆಚ್.ಒ. ರವರು ಮೆಡಿಕಲ್ ಆಫೀಸರ್‌ನ್ನು ಪೋಸ್ಟಿಂಗ್ಸ್ ಮಾಡಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ? ಎಂದು ನಾನು ಕೇಳಿರುವುದರಿಂದ ಈ ಪ್ರಶ್ನೆಗೆ ತಮ್ಮ ಉತ್ತರ ಬರಲೇಬೇಕಲ್ಲವೆ?

ಅಧ್ಯಕ್ಷರು.—ಬಂದಿದೆ ಎಂದು ಹೇಳಿದ್ದಾರಲ್ಲಾ,

ಶ್ರೀ ಎಸ್, ಹೆಚ್.ಕೌಜಲಗಿ.—ಈಗ ನೀವು ಪೋಸ್ಟಿಂಗ್ ಮಾಡಿರತಕ್ಕ ಮೆಡಿಕಲ್ ಆಫೀಸರನ್ನು ಬೇರೆಕಡೆಗೆ ಮತ್ತೆ ವರ್ಗಾವಣೆ ಮಾಡಿದರೆ ನಮ್ಮಲ್ಲಿರತಕ್ಕ ಜನರಿಗೆ ಬಹಳ ತೊಂದರೆಯಾಗುತ್ತದೆ, ಒಂದೆರಡು ತಿಂಗಳೆಕಾಲ ಕಳುಹಿಸಿಕೊಟ್ಟರೆ ನಮ್ಮದೇನೂ ತಕರಾರಿಲ್ಲ. ಆದರೆ ಹೆಚ್ಚುಕಾಲ ವರ್ಷಗಟ್ಟಲೆ ಕಳುಹಿಸಿಕೊಡಬಾರದು. ಏಕೆಂದರೆ ಒಬ್ಬ ಮೆಡಿಕಲ್ ಆಫೀಸರ್‌ನ್ನು ಬೆಳಗಾಂನಿಂದ ಬಾಗೇವಾಡಿಗೆ, ಬಾಗೇವಾಡಿಯಿಂದ ಬಾಗಲಕೋಟೆಗೆ ಅಂತ ಡೆಪ್ಯುಟೇಷನ್ ಕಳುಹಿಸುವುದಾದರೆ ಬಹಳ ತೊಂದರೆಯಾಗುತ್ತದೆ.